# ಕರ್ನಾಟಕ ಸರ್ಕಾರ

## ಅಬಕಾರಿ ಆಯುಕ್ತರ ಕಛೇರಿ, ಒಕ್ಕಲಿಗರ ಭವನ, ಕೆ.ಆರ್.ಸಿ. ವೃತ್ತ, ಬೆಂಗಳೂರು-27

ಸಂಖ್ಯೆ: ಇಸಿಇ/26/ವೈ.ವೆ/2008 ದಿನಾಂಕ:28-10-2008

## ಸುತ್ತೋಲೆ

ವಿಷಯ: ಅಬಕಾರಿ ಇಲಾಖೆಯ ಅಧಿಕಾರಿಗಳ/ನೌಕರರ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಕುರಿತು.

ಉಲ್ಲೇಖ:
1. 1963 ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿ.
2. ದಿನಾಂಕ: 22-01-2001 ರ ಡಿಪಿಎಆರ್/1/ಎಸ್ಎಂಆರ್/2000 ಕ್ರಮಾಂಕದ ಸರ್ಕಾರಿ ಆದೇಶ.
3. ದಿನಾಂಕ: 16-04-2001 ರ ಎಫ್‌ಡಿ/2/ಟಿಎಫ್‌ಪಿ/2001 ಕ್ರಮಾಂಕದ ಸರ್ಕಾರದ ಆದೇಶ.
4. ದಿನಾಂಕ:31-07-2003 ರ ಎಂಡಿಎ/16/2003-04 ಕ್ರಮಾಂಕದ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-9 ಇವರ ಸುತ್ತೋಲೆ.

*****

ಅಬಕಾರಿ ಇಲಾಖೆಯ ಅಧಿಕಾರಿಗಳ/ನೌಕರರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಮರುಪಾವತಿಸಲು ಪರಿಶೀಲನೆಗಾಗಿ ಮತ್ತು ಮಂಜೂರಾತಿಗಾಗಿ ಈ ಕಛೇರಿಗೆ ಕಳುಹಿಸಲಾಗುತ್ತಿದ್ದು, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿ 1963 ರ ನಿಯಮದಂತೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/1/ಟಿಇಪಿ/2001, ಬೆಂಗಳೂರು ದಿ: 02-02-2001 ರ ಕ್ರಮ ಸಂಖ್ಯೆ: 25 ರಲ್ಲಿ ತಿಳಿಸಿರುವಂತೆ ಆಯಾ ಕಛೇರಿಗಳಲ್ಲಿಯೇ ಅಧಿಕಾರಿಗಳ/ನೌಕರರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿಕೊಂಡು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬಹುದಾಗಿರುವುದರಿಂದ ಇನ್ನು ಮುಂದೆ ತಮ್ಮ ತಮ್ಮ ಕಛೇರಿಯ ಹಂತದಲ್ಲಿಯೇ ಈ ಕೆಳಕಂಡ ಸೂಚನೆಗಳನುಸಾರ ವೈದ್ಯಕೀಯ ವೆಚ್ಚ ಮರುಪಾವತಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

1. ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಈ ಕಛೇರಿಗೆ ಕಳುಹಿಸದೆ, **ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 3(ಬಿ) ರನ್ವಯ ಮತ್ತು ಕೆ.ಸಿ.ಎಸ್.ಆರ್ ನಿಯಮಗಳ 572 ರ ನಿಯಮದ 5 ನೇ ಅನುಚ್ಛೇದದ** ಪ್ರಕಾರ, ತಮ್ಮ ಪ್ರವಾಸ ಭತ್ಯೆಯ ಬಿಲ್ಲುಗಳ ವೆಚ್ಚವನ್ನು ಖಜಾನೆಯಿಂದ ಸೆಳೆದು ಪಾವತಿ ಮಾಡಿಕೊಳ್ಳುವ ಅಧಿಕಾರವಿರುವ ನಿಯಂತ್ರಣಾಧಿಕಾರಿಗಳಾದ **ಅಬಕಾರಿ ಜಂಟಿ ಆಯುಕ್ತರು** ಹಾಗೂ **ಅಬಕಾರಿ ಉಪ ಆಯುಕ್ತರು** ಅವರ ಮತ್ತು ಅವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುವ ಪತ್ರಾಂಕಿತ/ಅಪತ್ರಾಂಕಿತ ನೌಕರರ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ, ಮೇಲು ರುಜು ಮಾಡಿ ಖಜಾನೆಯಿಂದ ಸೆಳೆದು ಬಟಾವಡೆ ಮಾಡಲು ಸಂಬಂಧಪಟ್ಟ ಕಛೇರಿಗಳಲ್ಲಿಯೇ ಸೂಕ್ತ ಕ್ರಮ ಕೈಗೊಳ್ಳುವುದು.

2. ಯಾವುದಾದರು ವೈದ್ಯಕೀಯ ಬಿಲ್ಲಿನ ಅರ್ಹತಾ ಮೌಲ್ಯ ನಿರ್ಧರಿಸುವ ಕುರಿತು ಚಿಕಿತ್ಸಾದರಗಳು ಲಭ್ಯವಿಲ್ಲದೇ ಸಂಶಯ ಉಂಟಾದಲ್ಲಿ ಮಾತ್ರ ಜಿಲ್ಲೆಯ ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಅಭಿಪ್ರಾಯ ಪಡೆದು ಮರುಪಾವತಿ ಬಗ್ಗೆ ಕ್ರಮ ಕೈಗೊಳ್ಳುವುದು.

3. ಅಧಿಕಾರಿಗಳು/ ನೌಕರರು ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ಮಾತ್ರ ಸರ್ಕಾರಿ ಆದೇಶ ಸಂಖ್ಯೆ: **ಡಿಪಿಎಆರ್/1/ಎಸ್‌ಎಂಆರ್/2000, ದಿನಾಂಕ: 22-01-2001** ರ ಪ್ರಕಾರ ವೈದ್ಯಕೀಯ ವೆಚ್ಚ ಮರುಪಾವತಿಗೆ ಅರ್ಹರಾಗಿರುತ್ತಾರೆ.

4. ಅಧಿಸೂಚಿತವಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚವನ್ನು ಮರುಪಾವತಿಸಲು ಬರುವುದಿಲ್ಲವಾದ್ದರಿಂದ, ಅಂತಹ ವೆಚ್ಚಗಳ ಬಗ್ಗೆ ಅವಶ್ಯವೆನಿಸಿದಲ್ಲಿ ಇಲಾಖಾ ಮುಖ್ಯಸ್ಥರೇ 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿ ಮತ್ತು ಸರ್ಕಾರದ ಆದೇಶ ಸಂಖ್ಯೆ: **ಎಫ್‌ಡಿ/1/ಟಿಇಪಿ/2001, ಬೆಂಗಳೂರು ದಿ:02-02-2001** ರ ಪ್ರಕಾರ ನಿಗದಿಪಡಿಸಿದ ದರದಂತೆ ಮರುಪಾವತಿಸಲು ವಿಶೇಷ ಮಂಜೂರಾತಿ ಪಡೆಯಲು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿ 1963 ರ ನಿಯಮ 31ರಡಿಯಲ್ಲಿ ಸಂಬಂಧಿಸಿದ ಇಲಾಖಾ ಸಚಿವಾಲಯದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರಸ್ತಾವನೆ ಸಲ್ಲಿಸಬೇಕಿರುತ್ತದೆ. ಆದುದರಿಂದ ಅಧಿಸೂಚಿತವಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚವನ್ನು ಮರುಪಾವತಿಸುವ ಸಂಬಂಧದ ಪ್ರಸ್ತಾವನೆಗಳನ್ನು ಮಾತ್ರ ಈ ಕಛೇರಿ ಕಳುಹಿಸುವುದು.

5. ಅಧಿಸೂಚಿತವಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸಾ ವೆಚ್ಚವನ್ನು ಮರುಪಾವತಿಸಲು, ಆಯಾ ಜಿಲ್ಲೆಗಳ, ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ಮೇಲು ರುಜು ಮಾಡಿಸಿ ಪ್ರಸ್ತಾವನೆಯನ್ನು ಈ ಕಛೇರಿಗೆ ಕಳುಹಿಸುವುದು ಹಾಗೂ ಅಂತಹ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಅನಿವಾರ್ಯತೆ ಮತ್ತು ಸನ್ನಿವೇಶಗಳ ಬಗ್ಗೆ ಸಂಬಂಧಿಸಿದ ಆಧಿಕಾರಿಗಳಿಂದ/ನೌಕರರಿಂದ ಸೂಕ್ತ ವಿವರಣೆಯನ್ನು ಪಡೆದು ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.

6. ವೈದ್ಯಕೀಯ ವೆಚ್ಚವನ್ನು ಮರುಪಾವತಿ ಸಂಬಂಧ ಅಧಿಕಾರಿಗಳು/ನೌಕರರು ಮನವಿಯನ್ನು ವಿಳಂಬವಾಗಿ ಸಲ್ಲಿಸಿದಲ್ಲಿ ಅಂತಹ ಮನವಿಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ 20-ಎ ರಡಿಯಲ್ಲಿ ಮನ್ನಾ ಮಾಡಿ ಮಂಜೂರಾತಿ ನೀಡಬೇಕಿರುವುದರಿಂದ, ಮನವಿಯನ್ನು ವಿಳಂಬವಾಗಿ ಸಲ್ಲಿಸಲು ಕಾರಣವೇನೆಂದು ಅಧಿಕಾರಿಗಳು/ನೌಕರರಿಂದ ಸೂಕ್ತ ವಿವರಣೆಯನ್ನು ಪಡೆದು ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.

7. ಇಲಾಖೆಯ *ಸಿ* ಮತ್ತು *ಡಿ* ದರ್ಜೆಯ ನೌಕರರಿಗೆ ದಿನಾಂಕ: 22-01-2001 ರ ಡಿಪಿಎಆರ್/1/ಎಸ್‌ಎಂಆರ್/2000 ಕಮಾಂಕದ ಸರ್ಕಾರಿ ಆದೇಶದ ಶೆಡ್ಯೂಲ್-1 ರಲ್ಲಿ ಸೂಚಿಸಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಶೆಡ್ಯೂಲ್-2 ರಲ್ಲಿ ಸೂಚಿಸಿರುವ ದರಗಳಂತೆ ಚಿಕಿತ್ಸೆ ಪಡೆಯಲು ಮುಂಗಡ ಠೇವಣಿ ಮಂಜೂರು ಮಾಡುವ ಪ್ರಸ್ತಾವನೆಗಳನ್ನು ತ್ವರಿತವಾಗಿ ಸಲ್ಲಿಸುವುದು.

8. ವೈದ್ಯಕೀಯ ಮರುಪಾವತಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2039-00-001-0-01-014 ಇತರೆ ವೆಚ್ಚಗಳು ಇದರಡಿಯಲ್ಲಿ ಭರಿಸುವುದು.

ಸಹಿ/-

ಅಬಕಾರಿ ಆಯುಕ್ತರು.

<u>ಇವರಿಗೆ:-</u>

1. ರಾಜ್ಯದ ಎಲ್ಲಾ ವಿಭಾಗಗಳ ಅಬಕಾರಿ ಜಂಟಿ ಆಯುಕ್ತರುಗಳು (ಜಾರಿ ಮತ್ತು ತನಿಖೆ).
2. ರಾಜ್ಯದ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳು.

ಅಬಕಾರಿ ಆಯುಕ್ತರ ಪರವಾಗಿ.